335

<u>ಕರ್ನಾಟಕ ವಿಧಾನ ಪರಿಷತ್ತು</u>

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 250

ಉತ್ತರಿಸಬೇಕಾದ ದಿನಾಂಕ : 12.08.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಾಲು ಒಕ್ಕೂಟಗಳಲ್ಲಿ ರಾಸುಗಳಿಗೆ ವಿಮೆ ಮಾಡಿಸುವಾಗ ಅನುಸರಿಸುವ ಕ್ರಮಗಳಾವುವು; (ವಿವರವನ್ನು ಒದಗಿಸುವುದು) | ಹಾಲು ಒಕ್ಕೂಟಗಳಲ್ಲಿ ರಾಸುಗಳಿಗೆ ವಿಮೆ ಮಾಡಿಸುವಾಗ ಅನುಸರಿಸುವ ಕ್ರಮಗಳು ಕೆಳಕಂಡಂತಿದೆ:<br>• ಹಾಲು ಒಕ್ಕೂಟಗಳು ಒಕ್ಕೂಟದ ಸಮಗ್ರ ವ್ಯಾಪಾರ ಯೋಜನೆಯಡಿ ಗುಂಪು ರಾಸು ವಿಮೆಯಲ್ಲಿ ವಿಮೆಗೊಳಪಟ್ಟ ರಾಸುಗಳ ಸಂಖ್ಯೆಯ ಮೇಲೆ ಹಣ ಕಾಯ್ದಿರಿಸಲಾಗುವುದು.<br>• ಕಾಯ್ದಿರಿಸಿರುವ ಮೊತ್ತಕ್ಕೆ ಮತ್ತು ವಿಮೆಗೆ ಒಳಪಡುವ ರಾಸುಗಳ ಸಂಖ್ಯೆಯ ಮೇಲೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುವುದು.<br>• ಟೆಂಡರ್‌ನಲ್ಲಿ Insurance Regulatory and Development Authority of India (IRDAI) ನೋಂದಾಯಿಸಲಾದ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಜನರಲ್ ಇನ್ಶೂರೆನ್ಸ್ ಕಂಪನಿಗಳು ಭಾಗವಹಿಸಲು ಟೆಂಡರ್ ಆಹ್ವಾನಿಸಿ, ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕರ್ನಾಟಕದಲ್ಲಿ ಮುದ್ರಣಗೊಳ್ಳುವ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಣೆ ಹೊರಡಿಸಲಾಗುತ್ತದೆ.<br>• ಟೆಂಡರ್ ಪ್ರಕಟಣೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ E-procurement Portal/KTPP ಮುಖೇನ ಪ್ರಕಟಣೆ ಮಾಡಿ ಆನ್‌ಲೈನ್ ನಲ್ಲಿಯೇ ಇ-ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಡಲಾಗುತ್ತದೆ.<br>• ಗುಂಪು ರಾಸು ವಿಮಾ ಟೆಂಡರ್ ತಾಂತ್ರಿಕ |

| | | |
|---|---|---|
| | | ಭಾಗ-01 & ವಾಣಿಜ್ಯ ಭಾಗ-02 ನ್ನು ಹೊಂದಿದ್ದು, ತಾಂತ್ರಿಕ ಭಾಗ-01ರಲ್ಲಿ ಒಕ್ಕೂಟದ ನಿಬಂಧನೆಗಳಿಗೆ ಅನುಸಾರವಾಗಿ ಹಾಗೂ ಒಕ್ಕೂಟದ ಮಾರ್ಗಸೂಚಿ ಅನುಸಾರ ಅರ್ಹತೆ ಹೊಂದಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಲು ಕೋರಿ ಅವುಗಳ ನೈಜತೆಯ ಬಗ್ಗೆ ಪರಿಶೀಲನೆ ಕೈಗೊಳ್ಳಲಾಗುವುದು. ವಾಣಿಜ್ಯ ಭಾಗ-02ರಲ್ಲಿ, ತಾಂತ್ರಿಕ ಭಾಗ-01ರಲ್ಲಿ ಉತ್ತೀರ್ಣರಾದ ವಿಮಾ ಕಂಪನಿಗಳನ್ನು ಅರ್ಹಗೊಳಿಸಿ, ವಾಣಿಜ್ಯ ಭಾಗ-02ನ್ನು ತೆರೆದು ಎಲ್-1 ಬಿಡ್ಡುದಾರರೊಂದಿಗೆ ದರ ಸಂಧಾನ ಸಭೆಯ ದಿನಾಂಕವನ್ನು ನಿಗದಿಪಡಿಸಿ, ಸದರಿ ದರ ಸಂಧಾನ ಸಭೆಯ ನಡವಳಿಯನ್ನು ಆಡಳಿತ ಮಂಡಳಿ ಸಭೆಯ ತೀರ್ಮಾನಕ್ಕೆ ಮಂಡಿಸಲಾಗುವುದು.<br>• ಆಡಳಿತ ಮಂಡಳಿ ಸಭೆಯ ಅನುಮೋದನೆ ನಂತರ ಸಂಬಂಧಪಟ್ಟ ಎಲ್-1 ಬಿಡ್ಡು ಹೊಂದಿದ್ದ ವಿಮಾ ಕಂಪನಿಗೆ ಆಸಕ್ತಿಯ ಅಭಿವ್ಯಕ್ತಿ (EOI) ಪತ್ರ ಜಾರಿ ಮಾಡಿ ಒಕ್ಕೂಟದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ಪತ್ರ ವ್ಯವಹಾರ ಮಾಡಲಾಗುತ್ತದೆ.<br>• ಆಸಕ್ತಿಯ ಅಭಿವ್ಯಕ್ತಿ (EOI) ಪತ್ರ ಪಡೆದು ವಿಮಾ ಕಂಪನಿಯು ಕರಾರು ಒಪ್ಪಂದದ ನಂತರ ಕಚೇರಿ ಆದೇಶ ಮಾಡಿ ವಿಮಾ ಕಂಪನಿಗೆ ಟೆಂಡರ್ ನೀಡಲಾಗುವುದು. |
| ಆ | 2022ರಿಂದ ಇಲ್ಲಿಯವರೆಗೆ ಬಮುಲ್‌ನಲ್ಲಿ ರಾಸುಗಳ ವಿಮೆಯನ್ನು ಯಾವ ಯಾವ ಕಂಪನಿಗಳಿಗೆ ನೀಡಲಾಗಿದೆ; ಮತ್ತು ರಾಸು ವಿಮೆ ಯೋಜನೆಯ ಟೆಂಡರ್ ವಿವರಗಳು ಸೇರಿದಂತೆ ವರ್ಷಾವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು; | 2022-23 ರಿಂದ ಇಲ್ಲಿಯವರೆಗೆ ಬಮುಲ್‌ನಲ್ಲಿ ರಾಸುಗಳ ವಿಮೆಯನ್ನು ನೀಡಿರುವ ಕಂಪನಿಗಳ ವಿವರ ಮತ್ತು ರಾಸು ವಿಮೆ ಯೋಜನೆಯ ಟೆಂಡರ್ ವಿವರಗಳನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ | 2022ರಿಂದ ಇಲ್ಲಿಯವರೆಗೆ ಸಹಕಾರ ಸಂಘಗಳ ನಿಯಮಾವಳಿ ಪ್ರಕಾರ ರಾಸುಗಳಿಗೆ ವಿಮೆ ಮಾಡಲು ವಿಮಾ ಕಂಪನಿಗಳು ಬಮುಲ್ ನೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಬಗ್ಗೆ ವರ್ಷಾವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು? | 2022-23 ರಿಂದ ಇಲ್ಲಿಯವರೆಗೆ ಸಹಕಾರ ಸಂಘಗಳ ನಿಯಮಾವಳಿ ಪ್ರಕಾರ ರಾಸುಗಳಿಗೆ ವಿಮೆ ಮಾಡಲು ವಿಮಾ ಕಂಪನಿಗಳು ಬಮುಲ್ ನೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಬಗ್ಗೆ ವರ್ಷವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: ಸಿಒ 127 ಸಿಸಿಬಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

**2022–23 ರಿಂದ 2025–26ರ ಅವಧಿಗೆ ಬಮೂಲ್‌ನಲ್ಲಿ ರಾಸುಗಳ ವಿಮೆಯನ್ನು ನೀಡಿರುವ ಟೆಂಡರ್ ವಿವರ ಈ ಕೆಳಕಂಡಂತೆ ಇರುತ್ತದೆ.**
**(ಅನುಬಂಧ–02)**

| ಕ್ರ. ಸಂ. | ಆರ್ಥಿಕ ವರ್ಷದ ವಿವರ | ಟೆಂಡರ್ ಸಂಖ್ಯೆ | ಟೆಂಡರ್ ನಲ್ಲಿ ಭಾಗವಹಿಸಿದ್ದ ವಿಮಾ ಕಂಪನಿಗಳ ಹೆಸರು | ವಾಣಿಜ್ಯ ಭಾಗಕ್ಕೆ ಅರ್ಹಗೊಂಡ ವಿಮಾ ಕಂಪನಿಗಳ ಹೆಸರು | ಟೆಂಡರ್ ನಲ್ಲಿ ನಮೂದಿಸಿದ್ದ ಪ್ರೀಮಿಯಂ ದರ (ಶೇ.ವಾರು) | ದರ ಸಂಧಾನ ಸಭೆಯ ಸಮಿತಿಯು ನಿಷ್ಕರ್ಷಿತ ಪ್ರೀಮಿಯಂ ದರ (ಶೇ.ವಾರು) |
|---|---|---|---|---|---|---|
| 1 | **2022-23** | BAMUL/P&I/BT-01/58/E-TENDER/2022-23/73/CALL-2 | IFFCO TOKIO GENERAL INSURANCE COMPANY LIMITED | THE ORIENTAL INSURANCE COMPANY LIMITED | **1.99(L1)** | **1.99** |
| | | | THE NEW INDIA ASSURANCE COMPANY LIMITED | IFFCO TOKIO GENERAL INSURANCE COMPANY LIMITED | **2.45(L2)** | |
| | | | THE ORIENTAL INSURANCE COMPANY LIMITED | THE NATIONAL INSURANCE COMPANY LIMITED | **4.57(L3)** | |
| | | | THE NATIONAL INSURANCE COMPANY LIMITED | | | |
| 2 | **2023-24** | BAMUL/P&I/BT-01/65/e-Tender/2023-24/67 | IFFCO TOKIO GENERAL INSURANCE COMPANY LIMITED | THE ORIENTAL INSURANCE COMPANY LIMITED | **2.13(L1)** | **2.10** |
| | | | THE NEW INDIA ASSURANCE COMPANY LIMITED | IFFCO TOKIO GENERAL INSURANCE COMPANY LIMITED | **3.48(L2)** | |
| | | | THE ORIENTAL INSURANCE COMPANY LIMITED | | | |
| | | | AGRICULTURE INSURANCE COMPANY OF INDIA LIMITED | | | |
| 3 | **2024-25** | KMF/2023-24/SE1075/CALL-2 | THE ORIENTAL INSURANCE COMPANY LIMITED | AGRICULTURE INSURANCE COMPANY OF INDIA LIMITED | **2.60(L1)** | **2.50** |
| | | | FUTURE GENERAL INSURANCNE COMPANY LIMITED | THE ORIENTAL INSURANCE COMPANY LIMITED | **4.72(L2)** | |
| | | | AGRICULTURE INSURANCE COMPANY OF INDIA LIMITED | | | |
| 4 | **2025-26** | KMF/2024-25/SE3200/CALL-2 | THE NATIONAL INSURANCE COMPANY LIMITED | AGRICULTURE INSURANCE COMPANY OF INDIA LIMITED | **2.90(L1)** | **2.85** |
| | | | THE NEW INDIA ASSURANCE COMPANY LIMITED | BAJAJ ALLIANZ GENERAL INSURANCE COMPANY LIMITED | **2.93(L2)** | |
| | | | BAJAJ ALLIANZ GENERAL INSURANCE COMPANY LIMITED | THE NEW INDIA ASSURANCE COMPANY LIMITED | **3.27(L3)** | |
| | | | AGRICULTURE INSURANCE COMPANY OF INDIA LIMITED | THE NATIONAL INSURANCE COMPANY LIMITED | **3.37(L4)** | |